ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,
ಪಿರಿಯಾಪಟ್ಟಣ.

ಸಿ ಸಿ ಸಂಃ **563-2019**

| | | |
|---|---|---|
| ಸಾಕ್ಷಿಯ ಹೆಸರುಃ | ದಿಲೀಪ್ | ಫ್ರಾಸಾಃಃ 09 |
| ತಂದೆ/ಗಂಡನ ಹೆಸರುಃ | ಉಮೇಶ್ | ಚಾಸಾಃಃ 13 |
| ವಯಸ್ಸುಃ | ವರ್ಷ 41 | ಪ್ರಮಾಣೀಕರಿಸಿದ ದಿಃ 08.03.2021. |
| ಉದ್ಯೋಗಃ | ಪೊಲೀಸ್ ಪೇದೆ | |
| ವಾಸ ಸ್ಥಳಃ | ಪಿರಿಯಾಪಟ್ಟಣ | |

ಮುಖ್ಯ ವಿಚಾರಣೆಃ ಸಸಅ ರಿಂದಃ

ದಿನಾಂಕಃ14.07.2014 ರಿಂದ 29.05.2017 ವರೆಗೆ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ18.05.2016 ರಂದು ಚಾಸಾ-05 ರವರು ನನ್ನನ್ನು ಈ ಪ್ರಕರಣದಲ್ಲಿ ಗಣಿಕ ಸಹಾಯಕನನ್ನಾಗಿ ನೇಮಿಸಿ ಅತ್ತಿಗೋಡು ಗ್ರಾಮಕ್ಕೆ ಕರೆದುಕೊಂಡು ಹೋಗಿ ಕೃತ್ಯ ಸಧ್ಥಳದ ಮಹಜರನ್ನು ಜರುಗಿಸಿಕೂಂಡು ಬರಲು ಹೇಳಿದ ಮೇರೆಗೆ ನಾನು ಹಾಗೂ ಚಾಸಾ-05 ರವರು ಕೃತ್ಯ ಸ್ಥಳಕ್ಕೆ ಅತ್ತಿಗೋಡು ಗ್ರಾಮದ ಗ್ರಾಮ ಪಂಚಾಯ್ತಿಯ ಮುಂಭಾಗದ ರಸ್ತೆಯಲ್ಲಿ ಫ್ರಾಸಾ-03 ರವರು ತೋರಿಸಿಕೊಟ್ಟ ಕೃತ್ಯ ಸ್ಥಳಕ್ಕೆ ಪಂಚರರಾದ ಫ್ರಾಸಾ-08 ಮತ್ತು ಚಾಸಾ-10 ಬರಮಾಡಿಕೊಂಡು ಈ ಪ್ರಕರಣದ ವಿಚಾರ ತಿಳಿಸಿ, ಅವರು ಪಂಚರರಾಗಲು ಒಪ್ಪಿಕೊಂಡ ಮೇರೆಗೆ ಕೃತ್ಯ ನಡೆದ ಸ್ಥಳವನ್ನು ನೋಡಿದಾಗ ಅದು ಗ್ರಾಮ ಪಂಚಾಯ್ತಿಯ ಮುಂಭಾಗದ ಸಾರ್ವಜನಿಕ ರಸ್ತೆ ಆಗಿರುತ್ತದ್ದೆ. ಸದರಿ ಜಮೀನಿನದ್ದಿಲ್ಲ ಕೃತ್ಯ ನಡೆದುದ್ದನ್ನು ಖಾತರಿಪಡಿಸಿಕೊಂಡು ಸುಮಾರು 5 ರಿಂದ 5.30 ಗಂಟೆವರೆಗೆ ಮಹಜರ್ ಕ್ರಮವನ್ನು ಪಂಚರರ ಸಮಕ್ಷಮ ಬರೆದಿರುತ್ತೇನೆ

ತನಿಖೆಯನ್ನು ಮುಂದುವರೆಸಿ ನಾಗನಹಳ್ಳಿ ಪಾಳ್ಯಕ್ಕೆ ಬಂದಾಗ ಚಾಸಾ-05 ರವರು ತೋರಿಸಿಕೊಟ್ಟ ಕೃತ್ಯ ಸ್ಥಳಕ್ಕೆ ಪಂಚರರಾದ ಫ್ರಾಸಾ-08 ಮತ್ತು ಚಾಸಾ-10 ಬರಮಾಡಿಕೊಂಡು ಈ ಪ್ರಕರಣದ ವಿಚಾರ ತಿಳಿಸಿ, ಅವರು ಪಂಚರರಾಗಲು ಒಪ್ಪಿಕೊಂಡ ಮೇರೆಗೆ ಕೃತ್ಯ ನಡೆದ ಸ್ಥಳವನ್ನು ನೋಡಿದಾಗ ಅದು ಸರ್ಕಾರಿ ಕಿರಿಯ ಫ್ರಾರ್ಥಮಿಕ ಮುಂಭಾಗದ ರಸ್ತೆ ಯಾಗಿರುತ್ತದೆ. ಮಹಜರ್ನ್ನು ಸುಮಾರು 6 ರಿಂದ 6.45 ಗಂಟೆವರೆಗೆ ಮಹಜರ್ ಕ್ರಮವನ್ನು ಪಂಚರರ ಸಮಕ್ಷಮ ಬರೆದಿರುತ್ತೇನೆ

ಸ್ಥಳ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿ.ಪಿ.02 ಮತ್ತು 08 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನುನ್ನು ನಿ.ಪಿ.**02(ಸಿ)** ಮತ್ತು **08(ಬಿ)** ಎಂದು ಗುರುತಿಸಲಾಯಿತು. ಆರೋಪಿಯನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ.

ಪಾಟೀ ಸವಾಲು ಆರೋಪಿತರ ಪರ ಶ್ರೀ.ಕೆ.ಆರ್.ವಿ.  ವಕೀಲರಿಂದಃ

ನನಗೆ ಕೃತ್ಯ ಸ್ಥಳವನ್ನು ತೋರಿಸಿದವರು ಪಿರ್ಯಾದುದಾರರಾಗಿರುವುದಿಲ್ಲ. ಎರಡೂ ಮಹಜರ್ ಗಳಿಗೆ ಬೇರೆ ಬೇರೆ ಪಂಚರರುಗಳು ಇರುವುದಿಲ್ಲ. ನಾನು ಕೃತ್ಯ ಸ್ಥಳಗಳಲ್ಲಿ ಮಹಜರ್ ನ್ನು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅವುಗಳನ್ನು ಠಾಣೆಯಲ್ಲಿ ಬರೆದಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು
ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.

ಸಹಿ/-

ಹೆಃಸಿ.ನ್ಯಾ. ಹಾಗೂ ಪ್ರ.ವ.ನ್ಯಾದಂ.
ಪಿರಿಯಾಪಟ್ಟಣ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,
ಪಿರಿಯಾಪಟ್ಟಣ.

ಸಿ ಸಿ ಸಂಃ **563-2019**

| | | |
|---|---|---|
| ಸಾಕ್ಷಿಯ ಹೆಸರುಃ | ಸ್ವಾಮಿ | ಫ್ರಾಸಾಃಃ 10 |
| ತಂದೆ/ಗಂಡನ ಹೆಸರುಃ | ತಿಮ್ಮಭೋವಿ | ಚಾಸಾಃಃ 10 |
| ವಯಸ್ಸುಃ | ವರ್ಷ 55 | ಪ್ರಮಾಣೀಕರಿಸಿದ ದಿಃ 08.03.2021. |
| ಉದ್ಯೋಗಃ | ಪೊಲೀಸ್ ಪೇದೆ | |
| ವಾಸ ಸ್ಥಳಃ | ಪಿರಿಯಾಪಟ್ಟಣ | |

ಮುಖ್ಯ ವಿಚಾರಣೆಃ ಸಸಅ ರಿಂದಃ

ಆರೋಪಿತರ ಪರಿಚಯವಿದೆ. ಸದರಿ ಪ್ರಕರಣದ ವಿಷಯ ನನಗೆ ಗೊತ್ತಿಲ್ಲ. ಆರೋಪಿ ಚಾಸಾ-01 ರವರ ಮೇಲೆ ಹಲ್ಲೆ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ನನಗೆ ಯಾವತ್ತೂ ಸಹ ಪೊಲೀಸರು ಕೃತ್ಯ ಸ್ಥಳಕ್ಕೆ ಕರೆದುಕೊಂಡು ಹೋಗಿ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಹಾಗೂ ಅಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿ ನನ್ನ ಸಹಿಯನ್ನು ಪಡೆದುಕೊಂಡಿಲ್ಲ ಈ ಬಗ್ಗೆ ನಾನು ಪೊಲೀಸ್‌ರ ಮುಂದೆ ಹೇಳಿಕೆ ನೀಡಿಲ್ಲ.

ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ **ನಿ.ಪಿ.02** ಮತ್ತು **08** ಎಂದು ಗುರುತಿಸಲಾಗಿದ್ದು ಅದರಲ್ಲಿರುವ ತನ್ನ ಸಹಿಯನ್ನು **ನಿ.ಪಿ.2(ಡಿ)** ಮತ್ತು **ನಿ.ಪಿ.08(ಸಿ)** ಎಂದು ಗುರುತಿಸಲಾಗಿದೆ. ನಾನು ಸುಮಾರು **05** ವರ್ಷದ ಹಿಂದೆ ಪೊಲೀಸ್‌ರ ಹೇಳಿಕೆ ಮೇರೆಗೆ ಸಹಿ ಮಾಡಿರುತ್ತೇನೆ.

**(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)**

ಪಾಟೀ ಸವಾಲು ಸಸಅ ರಿಂದಃ

ದಿನಾಂಕಃ 18.05.2016 ರಂದು ಬೆಟ್ಟದಪುರ ಪೊಲೀಸ್‌ರು ಸಂಜೆ 5 ಗಂಟೆ ಸಮಯದಲ್ಲಿ ನನ್ನನ್ನು ಮತ್ತು ಫ್ರಾಸಾ-06 ರವರನ್ನು ಕರೆದುಕೊಂಡು ಅತ್ತಿಗೋಡು ಗ್ರಾಮ ಪಂಚಾಯ್ತಿ ಮಳಿಗೆಗಳ ಮುಂಭಾಗದ ರಸ್ತೆಯ ಬಳಿ ಬರಮಾಡಿಕೊಡಯಿ ಈ ಪ್ರಕರಣದ ವಿಷಯವನ್ನು ತಿಳಿಸಿ ನಮ್ಮನ್ನು ಪಂಚರಾಗಲು ಕೋರಿದ್ದು ನಾವು ಒಪ್ಪಿದ ಮೇರೆಗೆ ಸದರಿ ಸ್ಥಳದಲ್ಲಿ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುವ ಫ್ರಾಸಾ-02 ರವರ ಹಾಜರಿದ್ದು ಸದರಿಯವರು ತೋರಿಸಿಕೊಟ್ಟ ಕೃತ್ಯ ಸ್ಥಳವನ್ನು ಪೊಲೀಸ್‌ರು ನಮ್ಮ ಸಮಕ್ಷಮ ಈಗ ಓದಿಸಿ ಕೇಳಿಸಿಕೊಂಡು ನಿ.ಪಿ.02 ರಂತೆ ಜರುಗಿಸಿ, ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿತರ ಪರ ಶ್ರೀ. ಕೆ.ಆರ್.ವಿ. ವಕೀಲರಿಂದಃ

ಇಲ್ಲ.

ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು
ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.

ಸಹಿ/-

ಹೆಃಸಿ.ನ್ಯಾ. ಹಾಗೂ ಪ್ರ.ವ.ನ್ಯಾದಂ.
ಪಿರಿಯಾಪಟ್ಟಣ.